ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಅಧ್ಯಕ್ಷರ ಹತ್ತಿರ ಮಾತನಾಡಿದ್ದೇನೆ. ಈಗ ತಮಗೂ ತಿಳಿಸುತ್ತಿದ್ದೇನೆ. ಇದು ಬಹಳ...

ಉಪಾಧ್ಯಕ್ಷರು :– ವಾಟಾಳ್ ನಾಗರಾಜ್‌ರವರೆ, ನಾಳೆ....

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ವಿಷಯ :– ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜಕ್ಕೆ ಅವಮಾನವಾಗುವಂಥ ನಡೆದ ಘಟನೆ:

ಶ್ರೀ ವಾಟಾಳ್ ನಾಗರಾಜ (ಚಾಮರಾಜ ನಗರ) :– ಮಾನ್ಯ ಅಧ್ಯಕ್ಷರೆ, ಶ್ರೀ ನಾರಾಯಣ ಮೂರ್ತಿ ಎನ್ನುವ ದೊಡ್ಡ ಮಹನೀಯ, ಅವರು ಇತ್ತೀಚಿನ ದಿವಸಗಳಲ್ಲಿ 15 ವರ್ಷಗಳಲ್ಲಿ ಜಗತ್ತಿನಲ್ಲಿ ನನ್ನನ್ನು ಬಿಟ್ಟರೆ, ಇನ್ನು ಯಾರು ಇಲ್ಲವೆಂಬ ವ್ಯಕ್ತಿಗತವನ್ನು ತೋರಿಸಿ, ಅವರಿಗೆ ಅವರನ್ನು ಬಿಟ್ಟರೆ ಈ ದೇಶದಲ್ಲಿ, ಪ್ರಪಂಚದಲ್ಲಿ, ಬೇರೆ ಯಾವ ಜನಾಂಗ ಇಲ್ಲ, ಯಾರು ಇಲ್ಲ. ತಾವು ಅತ್ಯಂತ ಮೇಧಾವಿ, ಬುದ್ಧಿವಂತ, ಮತ್ತು ಈ ದೇಶಕ್ಕೆ ನನ್ನನ್ನು ಬಿಟ್ಟರೆ ಮತ್ಯಾರೂ ಇಲ್ಲವೆನ್ನುವಂಥ ಹೆಗ್ಗಳಿಕೆಯಿಂದ, ನಿನ್ನೆ ಅವರದೇ ಆದಂತಹ ಸಂಸ್ಥೆಯಲ್ಲಿ, ಒಂದು ದೊಡ್ಡ ಸಮಾರಂಭ ಮಾಡಿದ್ದು, ಈ ಸಮಾರಂಭಕ್ಕೆ ವಿದೇಶದವರು ಬಂದಿದ್ದಾರೆ. ರಾಷ್ಟ್ರಗೀತೆಯೆಂದರೆ, ನಾರಾಯಣ ಮೂರ್ತಿಯವರಿಗೆ ಗೊತ್ತಿಲ್ಲ. ನಾರಾಯಣ ಮೂರ್ತಿ ಈ ದೇಶದವರಲ್ಲ, ಕರ್ನಾಟಕ ರಾಜ್ಯದವರಲ್ಲ, ಅಮೇರಿಕಾದವರಲ್ಲ, ರಷ್ಯಾದವರಲ್ಲ, ಅವರು ಚಂದ್ರಲೋಕದವರು ಇರಬಹುದು. ಈ ದೇಶದಲ್ಲಿ ರಾಷ್ಟ್ರಗೀತೆಗೆ ಎಷ್ಟು ಮಾನ್ಯತೆ ಇದೆ, ಎಷ್ಟು ಗೌರವವಿದೆ, ನಾವು ಎಷ್ಟು ಕೊಡಬೇಕಾಗಿದೆ. ಆದರೆ ರಾಷ್ಟ್ರಗೀತೆಯನ್ನು ಹಾಡುವುದರಿಂದ, ವಿದೇಶದವರಿಗೆ ಅಪಮಾನವಾಗುತ್ತದೆನ್ನುವ ರೀತಿಯಲ್ಲಿ ರಾಷ್ಟ್ರಗೀತೆಯನ್ನು ಹಾಡಲಿಲ್ಲ. ಇದುವರೆಗೂ ನಾಯಾಯಣಮೂರ್ತಿಯನ್ನು ಬಂಧಿಸಲಿಲ್ಲ. ಇದರ ಬಗ್ಗೆ ತನಿಖೆಯಾಗಲಿಲ್ಲ. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ, ನೀವು ಯಾವ ರೀತಿ ಹೇಳಿದ್ದೀರಿ. ರಾಷ್ಟ್ರಗೀತೆಗೆ ಯಾವ ರೀತಿ ಅಗೌರವವನ್ನು ಮಾಡಿದ್ದೀರೆಂದು ಅವರನ್ನು ಕೇಳಲಿಲ್ಲ. ಇದರ ಜೊತೆಗೆ ಕಾವೇರಿ ಚಳುವಳಿ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ. ಕಾವೇರಿ ಚಳುವಳಿ ಬೇಕೆ? ಏಕೆ ಚಳುವಳಿ ಮಾಡಬೇಕು? ಯಾವ ಉದ್ದೇಶಕ್ಕೆ ನಿಮ್ಮ ಚಳುವಳಿ? ಏನು ಎಂದು, ತೀವ್ರ ಲಘುವಾಗಿ ಮಾತನಾಡಿದ್ದಾರೆ. ಇವರು ಒಬ್ಬ ಕನ್ನಡದ ದ್ರೋಹಿ, ಎಂದು ನಾನು ನೇರವಾಗಿ ಹೇಳುತ್ತೇನೆ. ಇವರಿಗೆ ಕನ್ನಡದ ಬಗ್ಗೆಯೂ ಅಭಿಪ್ರಾಯವಿಲ್ಲ, ಕನ್ನಡಿಗರಿಗೂ

ಕೆಲಸವನ್ನು ಕೊಟ್ಟಿಲ್ಲ. ಆದರೆ ನಾರಾಯಣ ಮೂರ್ತಿಗೆ ಎಲ್ಲಾ ಸರ್ಕಾರಗಳು ಹೆದರುತ್ತವೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಕೇಂದ್ರದ ಮಂತ್ರಿಗಳು, ರಾಷ್ಟ್ರಪತಿಯವರು ಎಲ್ಲರೂ, ಹೆದರುತ್ತಾರೆ ಎಂದು ನನಗನಿಸುತ್ತದೆ. ಏನು ಉದ್ದೇಶ? ನಾನು ಹೇಳುತ್ತೇನೆ, ಅವರ ಇಡೀ ಸಂಸ್ಥೆಯು ನಮ್ಮ ರಾಜ್ಯ ಬಿಟ್ಟು ಬೇರೆ ಕಡೆಗೆ ಹೋಗಲಿ. ನಾರಾಯಣ ಮೂರ್ತಿಯನ್ನು ಗಡಿಪಾರು ಮಾಡಬೇಕು. ನಮಗೆ ಇನ್‌ಫೋಸಿಸ್ ಬೇಕಾಗಿಲ್ಲ. ಅದರಿಂದ ನಮ್ಮ ಕನ್ನಡಿಗರಿಗಾಗಲಿ, ಯಾರಿಗೂ ಉದ್ಯೋಗ ದೊರಕುವುದಿಲ್ಲ. ಇಷ್ಟು ಅತ್ಯಂತ ಅಗೌರವವನ್ನು ಮಾಡಿರುವಂಥ ನಾರಾಯಣ ಮೂರ್ತಿಯನ್ನು ಇದುವರೆಗೂ ಬಂಧಿಸದೇ ಇರುವಂಥಾದ್ದು ಸರಿಯಲ್ಲ, ಕೂಡಲೇ ಬಂಧಿಸಬೇಕು, ಮತ್ತು ಇದರ ಬಗ್ಗೆ ಸಮಗ್ರವಾಗಿ ತಕ್ಷಣವೇ CBI Enquiry ಆಗಬೇಕು, ಏಕೆಂದರೆ ರಾಷ್ಟ್ರಗೀತೆಗೆ ಅಪಮಾನವನ್ನು ಮಾಡಿದ್ದಾರೆ. ಇದುವರೆಗೂ ನಮ್ಮ ಸರ್ಕಾರವೂ ಮಾತನಾಡಿಲ್ಲ, ಕೇಂದ್ರ ಸರ್ಕಾರದ ಅದು ಯಾರ ಎದುರಿಗೆ? ರಾಷ್ಟ್ರಪತಿಯವರ ಎದುರಿಗೆ, ಗೌರವಾನ್ವಿತ ರಾಷ್ಟ್ರಪತಿಗಳಾದಂಥ ಅಬ್ದುಲ್ ಕಲಾಂರವರ ಎದುರಿಗೆ, ಇವರು ಎಲ್ಲಿಯವರೆಗೆ ಹೊರಟಿದ್ದಾರೆ. ರಾಷ್ಟ್ರಗೀತೆಯನ್ನು ವಿರೋಧ ಮಾಡಿದಂಥ ನಾರಾಯಣ ಮೂರ್ತಿ ಈಗ ದೇಶದ ರಾಷ್ಟ್ರಪತಿಯಾಗಬೇಕು. ಅದಕ್ಕೊಂದು ಪ್ರಚಾರ ಶುರುವಾಗಿದೆ, ಅದಕ್ಕೊಂದು ವ್ಯವಸ್ಥೆ ಶುರುವಾಗಿದೆ. xx xx xx, ಈ ಬಗ್ಗೆ ತೀವ್ರವಾಗಿ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು, ಬಂಧಿಸಬೇಕು, ಗಡಿಪಾರು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :- ಮಾನ್ಯ ಉಪಾಧ್ಯಕ್ಷರೆ, ಮನುಷ್ಯ ಎಷ್ಟೇ ದೊಡ್ಡವನಿರಲಿ, ರಾಷ್ಟ್ರಕ್ಕಿಂತ ನಾನು ದೊಡ್ಡವನಾಗುತ್ತೇನೆಂಬ ಭಾವನೆ ಏಕೆ ಬಂತೋ, ನನಗೆ ಅರ್ಥವಾಗಲಿಲ್ಲ. ಸನ್ಮಾನ್ಯ ರಾಷ್ಟ್ರಾಧ್ಯಕ್ಷರೆದುರಿಗೆ ರಾಷ್ಟ್ರಗೀತೆಯನ್ನು ನುಡಿಸಬೇಡಿಯೆಂದು ಹೇಳಿದಲ್ಲದೇ, ನುಡಿಸಿದರೆ ವಿದೇಶಿಯರಿಗೆ ಮುಜುಗರವಾಗುತ್ತದೆ, ಅವಮಾನವಾಗುತ್ತದೆ, ಹಾಗಾಗಿ ನಾನು ರಾಷ್ಟ್ರಗೀತೆಯನ್ನು ನುಡಿಸುವುದಕ್ಕೆ ಒಪ್ಪಲಿಲ್ಲವೆಂದು ಹೇಳುವಂಥ ಒಬ್ಬ ವ್ಯಕ್ತಿ, ಭಾರತ ದೇಶದೊಳಗೆ ಇದ್ದುಕೊಂಡು ತೋರಿಸುತ್ತಿದ್ದಾರೆಂದರೆ, ಇದಕ್ಕಿಂತ ಅವಮಾನ ಈ ರಾಷ್ಟ್ರಕ್ಕೆ ಇನ್ನೊಂದು ಇಲ್ಲ. ಸನ್ಮಾನ್ಯ ರಾಷ್ಟ್ರಪತಿಯವರು ಅಲ್ಲಿಗೆ ಹೋಗಲೇಬಾರದಿತ್ತು. ಅಕಸ್ಮಾತ್ ಹೋದರೂ ಏನು ಶಿಷ್ಟಾಚಾರವಿದೆ, ಏನೂ ಪ್ರೊಟೊಕಾಲ್ ಇದೆ. ಅವರಿಗೆ

---

xxx ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಕೊಡಬೇಕಾದ ಗೌರವವಿದೆ, ಅದನ್ನು ನೋಡಿಕೊಳ್ಳಬೇಕಾದದ್ದು, ಅಲ್ಲಿದ್ದಂತಹ ಅಧಿಕಾರಿಗಳ ಕೆಲಸವಾಗಿತ್ತು. ಅಲ್ಲಿದ್ದ ಅಧಿಕಾರಿಗಳು ಅದನ್ನು ಇನ್‌ಸಿಸ್ಟ್ ಮಾಡಬೇಕಾಗಿತ್ತು. ಯಾರ ತೆವಲಲ್ಲಿ ಈ ರಾಷ್ಟ್ರದ ವ್ಯವಹಾರ ನಡೆಯುತ್ತಿದೆ ಗೊತ್ತಿಲ್ಲ. ರಾಷ್ಟ್ರಪತಿಯವರನ್ನೇ ನಿಲ್ಲಿಸಿಕೊಂಡು ನನಗೆ ರಾಷ್ಟ್ರಗೀತೆಯನ್ನು ನುಡಿಸುವುದಕ್ಕೆ ಆಗುವುದಿಲ್ಲ, ಬೇರೆಯವರಿಗೆ ಅವಮಾನವಾಗುತ್ತದೆಂದು ಆದರೆ, ಯಾವ ನೆಲದಲ್ಲಿ ಅವರು ಬದುಕಿದ್ದಾರೆ? ನಾವು ಬೇರೆಯವರಾ? ಇವರು ಅವರ ಸಂಸ್ಥೆಗೆ ಬಂದು ಕುಳಿತಿದ್ದವರು ಬೇರೆಯವರಾ ಎಂಬುದನ್ನು ಚರ್ಚೆ ಮಾಡಬೇಕಾಗಿದೆ. ಯಾರ್ಯಾರಿಗೆ ಅವಮಾನವಾಗಿದೆ, ನಾಳೆ ದಿವಸ ಅವರು ಈ ಬಾವುಟವನ್ನು ತೆಗೆದುಬಿಡಿ, ಈ ಬಾವುಟವನ್ನು ನೋಡಿಬಿಟ್ಟರೆ ವಿದೇಶಿಯರಿಗೆ ಅವಮಾನ ಮಾಡಿದ ಹಾಗೆ ಆಗುತ್ತದೆ. ಇನ್ನೊಂದು ಅವರ ಬಾವುಟ ತಂದು ಇಲ್ಲಿ ಹಾರಿಸಿಬಿಡಿ ಎಂದು. ನಾವು ಆ ಕೆಲಸವನ್ನು ಮಾಡಬೇಕಾಗುತ್ತದೆ. ಸರ್ಕಾರಗಳು ಎಚ್ಚೆತ್ತುಕೊಂಡಿರಬೇಕಾಗುತ್ತದೆ. ಇದು ದೇಶದ್ರೋಹ ಪ್ರಕರಣವೆಂದು ತಿಳಿದುಕೊಳ್ಳಬೇಕಾಗುತ್ತದೆ. ಆ ರೀತಿಯಲ್ಲಿ' ಶಿಸ್ತಿನ ಕ್ರಮವನ್ನು ಅವರ ಮೇಲೆ ಜರುಗಿಸಬೇಕಾಗುತ್ತದೆ. ಪದೇ ಪದೇ ಅವರು ಚುಚ್ಚಿ ಚುಚ್ಚಿ, ಇವತ್ತು ವ್ಯವಸ್ಥೆಯ ವಿರುದ್ಧವಾಗಿ, ಆಡಳಿತದ ವಿರುದ್ಧವಾಗಿ, ತಲೆ ಹಾಕುತ್ತಿದ್ದಾರೆ. ಶ್ರೀಮಂತಿಕೆ ದುಡ್ಡು, ಈ ಮನುಷ್ಯನನ್ನು ಇಷ್ಟೊಂದು ಲೆವಲ್‌ಗೆ ತೆಗೆದುಕೊಂಡು ಹೋಗಬಾರದಿತ್ತು. ಇವರು ಶೇರು ಕೊಡಿಯೆಂದು ಇನ್‌ಫೋಸಿಸ್ ಮಾಡುವ ದಿವಸ ತಿರುಪೆ ಎತ್ತುತ್ತಿದ್ದರು. ರಾಜ್ಯದ ಜನರು ಇನ್‌ವೆಸ್ಟ್ ಮಾಡಿದ್ದಾರೆ. ಇವತ್ತು ಇನ್‌ಫೋಸಿಸ್‌ನ ಆಸ್ತಿ ಅವರೊಬ್ಬರದೇ ಅಲ್ಲ. ಇಡೀ ಆಸ್ತಿ ತನಿಖೆಯಾಗಬೇಕಾಗಿದೆ. ಅವರು ಇವತ್ತು ಕರ್ನಾಟಕ ರಾಜ್ಯದ ಸವಲತ್ತನ್ನು, ಭಾರತ ದೇಶದ ಸವಲತ್ತನ್ನು ಬಳಸಿದ್ದಾರೆ, ಅದು ತನಿಖೆಯಾಗಬೇಕಾಗುತ್ತದೆ, ಆ ಹಣವನ್ನು ಅವರಿಂದ ವಾಪಸ್ಸು ಕಟ್ಟಿಸಬೇಕಾಗುತ್ತದೆ. ಇವರು ಇನ್‌ಫೋಸಿಸ್‌ನಲ್ಲಿ ನಾಲ್ಕು ಜನರಿಗೆ ಉದ್ಯೋಗವನ್ನು ಕೊಟ್ಟು ಉದ್ಧಾರ ಮಾಡಿಲ್ಲ. ಎಲ್ಲಾ talent export ನಮ್ಮದು, ಇವತ್ತು ನಮ್ಮ ಬೆಂಗಳೂರಿನಲ್ಲಿರುವ ಹುಡುಗರು ಬುದ್ಧಿವಂತರಾಗಿದ್ದ ದೆಶೆಯಿಂದ, ಇವತ್ತು ಆ ಸಂಸ್ಥೆಗೆ ಹೆಸರು ಬಂದಿದೆ. ಈ ಮನುಷ್ಯನ ಒಬ್ಬನದೇ ಅಲ್ಲ, ಸ್ವಲ್ಪ ಗೌರವವನ್ನಿಟ್ಟುಕೊಂಡು ಹೋಗುವ ಸ್ಥಿತಿಯನ್ನು ಸರ್ಕಾರ ನಡೆಸುವವರು ನಿರ್ಮಾಣ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :- ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ ಬೇರೆ ಬೇರೆ ದೇಶಗಳಲ್ಲಿ ಕ್ರೀಡೆಗಳು ಆಗುವಾಗ, ನಮ್ಮ ದೇಶದ national flag ಅನ್ನು ಹಾರಿಸುತ್ತಾರೆ. ಯಾವುದೇ ದೇಶದಲ್ಲಾಗಲೀ ಯಾರು ಗೆದ್ದಿದ್ದಾರೆ. ಆ ದೇಶದ ರಾಷ್ಟ್ರಗೀತೆಯನ್ನು ಅಲ್ಲಿ ಹಾಡುತ್ತಾರೆ. ಆದರೆ ನಮ್ಮ ದೇಶದಲ್ಲಿ ನಮ್ಮ ರಾಷ್ಟ್ರಪತಿಯವರ ಸಮ್ಮುಖದಲ್ಲಿ ನಮಗೆ ಪತ್ರಕರ್ತ ಮಿತ್ರರೊಬ್ಬರು ಹೇಳಿದರು, ನಮಗೆ ಅತ್ಯಂತ ನೋವಾಯಿತು. ರಾಷ್ಟ್ರಪತಿಯವರು ಸ್ವತಃ ಹಾಡುವುದಕ್ಕೆ ಶುರುಮಾಡಿದರಂತೆ, ಬೇರೆಯವರು ಹಾಡುವವರು ಇರಲಿಲ್ಲವಂತೆ, ಆ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿತ್ತು. ಕೇವಲ ಇವರು ಮುಜುಗರವಾಯಿತೆಂದು ಹೇಳಿದ್ದು ಮಾತ್ರವಲ್ಲ. ಅಲ್ಲಿ ಕೊನೆಗೆ ಮಾನ್ಯ ರಾಷ್ಟ್ರಪತಿಯವರೊಬ್ಬರೆ ಹಾಡುವಂಥಾ ಪರಿಸ್ಥಿತಿ ನಿರ್ಮಾಣವಾಯಿತೆಂದು ಅಲ್ಲಿಗೆ ಹೋಗಿದ್ದಂಥ ಪತ್ರಕರ್ತರೊಬ್ಬರು ಬಂದು ನಮಗೆ ಹೇಳಿದ್ದು. ಇಂಥ ಪರಿಸ್ಥಿತಿ ನಮ್ಮ ದೇಶದಲ್ಲಿ ಆಗಬೇಕಾ? ನಮ್ಮ ಸ್ನೇಹಿತರೆಲ್ಲಾ ಹೇಳಿದ ಹಾಗೆ ಅದರ ಬಗ್ಗೆ, ತನಿಖೆಯಾಗಬೇಕು, ಕ್ರಮ ಕೈಗೊಳ್ಳಲೇಬೇಕಾಗುತ್ತದೆ. ವ್ಯಕ್ತಿ ನಮ್ಮ ದೇಶಕ್ಕಿಂತ ದೊಡ್ಡದಾಗುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಸರ್ಕಾರ serious ಆಗಿ ತೆಗೆದುಕೊಂಡು ಕ್ರಮ ಜರುಗಿಸಬೇಕೆಂದು, ನಾನು ತಮ್ಮ ಮುಖೇನ ಮಾನ್ಯ ಎಂ.ಪಿ.ಪ್ರಕಾಶ್‌ರವರನ್ನು ಕೇಳಿಕೊಳ್ಳುತ್ತೇನೆ.

5–00 ಗಂಟೆ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಮಾನ್ಯ ರಾಷ್ಟ್ರಪತಿಯವರು ಬೆಂಗಳೂರು ನಗರಕ್ಕೆ ಬಂದಿದ್ದರು, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇನ್‌ಫೋಸಿಸ್ ಸಂಸ್ಥೆಗೆ ಹೋದಾಗ ಅಲ್ಲಿ ನಾರಾಯಣಮೂರ್ತಿಯವರ ನಡವಳಿಕೆ ಏನು ಇದೆ. ಅದರ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಸಾರ್ವಜನಿಕವಾಗಿಯೂ ಒಂದು ಅಭಿಪ್ರಾಯ ಮೂಡಿದೆ. ಮಾನ್ಯ ಎಂ.ಪಿ.ಪ್ರಕಾಶ್‌ರವರೆ, ತಾವು ಗೃಹ ಸಚಿವರಾಗಿದ್ದೀರಿ, ಯಾರು ಎಷ್ಟೇ ದೊಡ್ಡವರಾಗಿರಲಿ, ಅವರು ಏನೇ ಮಹತ್ವಾಕಾಂಕ್ಷಿಯಾಗಿ ರಾಷ್ಟ್ರದಲ್ಲಿ ಏನು ಆಗಬೇಕಾಗಿದೆ. That is different. ಆದರೆ ರಾಷ್ಟ್ರದ ಧ್ವಜದ ಬಗ್ಗೆ ಇವತ್ತು ಗೌರವ ಕೊಡಬೇಕಾದ್ದು ಎಲ್ಲರ ಆದ್ಯ ಕರ್ತವ್ಯ. ಇಲ್ಲಿ ಅದು ಆಗಿಲ್ಲ, ಆದುದರಿಂದ ಸರಿಯಾದ ರೀತಿಯಲ್ಲಿ ತಾವು ನೋಡಿ, ತಪಾಸಣೆ ಮಾಡಿ, verify ಮಾಡಿ, if that is there, ಯಾರೇ ಇರಲಿ, ಅವರ ಬಗ್ಗೆ you have to take stern action. ಯಾರು ಕೂಡ ರಾಷ್ಟ್ರ ಧ್ವಜಕ್ಕೆ ಅಗೌರವವನ್ನು ತೋರಿಸುವಂಥ ರೀತಿಯಲ್ಲಿ,

ರಾಷ್ಟ್ರಗೀತೆಗೆ ಅವಮಾನವಾಗುವುದನ್ನು ಇವತ್ತಿನ ದಿವಸ ನಮ್ಮ ಸರ್ಕಾರ ಸಹಿಸಲಾಗದು, ಎನ್ನುವಂಥಾದ್ದು. You have to give that message.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) :– ಮಾನ್ಯ ಉಪಾಧ್ಯಕ್ಷರೆ, ಈ ಘಟನೆ ಮೈಸೂರಿನಲ್ಲಿ ನಡೆದಿರುವುದು. ರಾಷ್ಟ್ರಪತಿಯವರು ಅಲ್ಲಿ ಇನ್‌ಫೋಸಿಸ್ ಸಂಸ್ಥೆಗೆ ಹೋಗಿದ್ದರು. ಅಲ್ಲಿ ರಾಷ್ಟ್ರಪತಿಯವರು ಹೋದಾಗ, ರಾಷ್ಟ್ರಗೀತೆಯನ್ನು ಹಾಡುವಂಥಾದ್ದು, ನಾವು ಮೊದಲಿನಿಂದಲೂ ಮಾಡಿಕೊಂಡು ಬಂದಿರುವಂಥ ಸಂಪ್ರದಾಯವಾಗಿದೆ. ರಾಷ್ಟ್ರದ ರಾಷ್ಟ್ರಗೀತೆಗೆ ಗೌರವ ಕೊಡಬೇಕು, ರಾಷ್ಟ್ರಧ್ವಜಕ್ಕೆ ಗೌರವವನ್ನು ಕೊಡಬೇಕಾದ್ದು, ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಮತ್ತು ಜವಾಬ್ದಾರಿ ಯಾರು ಎಷ್ಟೇ ದೊಡ್ಡವರಾದರೂ ಕೂಡ, ಯಾವುದೇ ಹುದ್ದೆಯಲ್ಲಿ ಇರಲಿ, ಎಷ್ಟೇ ಶ್ರೀಮಂತನಾಗಿರಲಿ, ಅವರು ಏನೇ ಆಗಿದ್ದರೂ ಕೂಡ, ದೇಶಕ್ಕಿಂತ ಅವರು ದೊಡ್ಡವರಾಗುವುದಕ್ಕೆ ಸಾಧ್ಯವಿಲ್ಲ. ರಾಷ್ಟ್ರಕ್ಕಿಂತ ದೊಡ್ಡವರಾಗುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಹೇಳಿದರಲ್ಲಾ, ಮಾನ್ಯ ನಾರಾಯಣಮೂರ್ತಿಯವರ ಇತ್ತೀಚಿನ ವರ್ತನೆ ಇದೆಯಲ್ಲಾ, ಅವರು ಬಹಳ ಉದ್ಧಟನದಿಂದ ಮಾತನಾಡುತ್ತಿದ್ದಾರೆಂದು ನನಗನಿಸುತ್ತದೆ. ರಾಜಕಾರಣಿಗಳಿಗೆ ಬುದ್ಧಿವಾದ ಹೇಳುವುದಕ್ಕೆ ಹೋಗುವುದು, ರಾಜಕಾರಣಿಗಳಿಗೆ ಏನೂ ಗೊತ್ತೇ ಇಲ್ಲವೆಂದು ಮಾತನಾಡುವುದು. ಅವರೇ ಎಲ್ಲಾ ಸರ್ವಜ್ಞ, ಎಲ್ಲಾ ಅವರಿಗೆ ಗೊತ್ತಿರುವುದು, ಎನ್ನತಕ್ಕಂಥ ರೀತಿಯಲ್ಲಿ ಮಾತನಾಡುವುದು. ಈ ದೇಶದ ಸಂಪತ್ತು ಅವರೊಬ್ಬರಿಗೆ ಸಂಪಾದನೆ ಮಾಡುವುದಕ್ಕೆ ಬರುವುದು, ಬೇರೆ ಇನ್ಯಾರಿಗೂ ಬರುವುದಿಲ್ಲವೆಂದು ಹೇಳುವುದು. ಈ ರೀತಿ ಎಲ್ಲಾ ಮಾಡಿ, ಒಂದು ವೇಳೆ ಕರ್ನಾಟಕದಲ್ಲಿ ನಾವು skilled man-power ಅನ್ನು ತಯಾರು ಮಾಡದೇ ಹೋಗಿದ್ದಿದ್ದರೆ, Stateನಲ್ಲಿ ಅವರಿಗೆ ಎಲ್ಲಾ concession ಕೊಡದೇ ಹೋಗಿದ್ದಿದ್ದರೆ, land ಕೊಡದೆ ಹೋಗಿದ್ದಿದ್ದರೆ, tax concession ಕೊಡದೇ ಹೋಗಿದ್ದಿದ್ದರೆ, ಮಾನ್ಯ ನಾರಾಯಣಮೂರ್ತಿಯವರು ಈ ಮಟ್ಟಕ್ಕೆ ಬರುವುದಕ್ಕೆ ಆಗುತ್ತಿತ್ತಾ? ಅವರು ಏನಾದರೂ ಇರಲಿ, ಒಬ್ಬ ordinary ವಿದ್ಯಾರ್ಥಿಯಾಗಿ ಮೈಸೂರಿನಲ್ಲಿ National Institute of Engineering college ನಲ್ಲಿ ಓದಿದವರು ಒಬ್ಬ ಇಂಜಿನಿಯರ್, 20 ವರ್ಷಗಳಿಂದ ನಾರಾಯಣ ಮೂರ್ತಿ ಏನು ಆಗಿದ್ದರು? He was nothing, absolutely nothing. ಕರ್ನಾಟಕದಲ್ಲಿ ಹೀಗೆಲ್ಲಾ ಆದಮೇಲೆ, skilled manpower ಎಲ್ಲ ಸಿಕ್ಕಿದ ಮೇಲೆ ಅವರು ಉದ್ಧಟನದ

ಮಾತುಗಳನ್ನಾಡುತ್ತಿದ್ದರೆ. English ಬರುವವರಿಗೆ ಕೆಲಸ ಕೊಡುತ್ತೇನೆ ಎಂದು ಹೇಳುವುದು, English ಬರದವರಿಗೆ ಕೆಲಸ ಕೊಡುವುದಿಲ್ಲ ಎಂದು ಹೇಳುವುದು ಮಾಡುತ್ತಿದ್ದಾರೆ. Foreigners ಗೆ ಕಿರಿಕಿರಿಯಾಗುತ್ತದೆ, ಮುಜುಗರವಾಗುತ್ತದೆ, ಅದಕ್ಕೋಸ್ಕರವಾಗಿ ನಾವು ರಾಷ್ಟ್ರಗೀತೆಯನ್ನು ಹಾಡಬಾರದು ಎನ್ನುವುದಾದರೆ ಇವರು ಭಾರತೀಯರಾಗಿರಲಿಕ್ಕೆ ನಾಲಾಯಕ್ಕು. ಅವರು ಅಲ್ಲಿಗೇ ಹೋಗಬೇಕು. ಅವರು ಈ ದೇಶದಲ್ಲಿ ಇರಲಿಕ್ಕೇ ನಾಲಾಯಕ್ಕು.

ಶ್ರೀ ಕೃಷ್ಣಬೈರೇಗೌಡ :– ಬಹುಶಃ ಅವರು ತಮ್ಮ ಕಂಪನಿಯ ಹೆಸರನ್ನು "New East India Company" ಎಂದು ಬದಲಾಯಿಸಿ ಬಿಟ್ಟರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ :– ಒಳ್ಳೆಯ ಸಲಹೆ. ಕೃಷ್ಣಬೈರೇಗೌಡರು ಹೇಳುತ್ತಿರುವ ಸಲಹೆಯಿದೆಯಲ್ಲ, ಅದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಅದನ್ನು ಸ್ವಲ್ಪ ನೋಡಿ. ಆಮೇಲೆ, ಕಾವೇರಿ ಹೋರಾಟದ ಬಗ್ಗೆ ಬಂದ್ ಏಕೆ ಮಾಡುತ್ತೀರಿ ಎಂದು ಹೇಳುತ್ತಾರೆ. ಹಾಗಾದರೆ ನಾಳೆ ಅವರಿಗೆ ಕುಡಿಯುವುದಕ್ಕೆ ಕಾವೇರಿ ನೀರು ಬೇಡವೇ? ನೀರನ್ನು ಎಲ್ಲಿಂದ ತೆಗೆದುಕೊಂಡು ಬರುತ್ತಾರೆ? ನೀರನ್ನು ಅವರೇ ತಯಾರು ಮಾಡಿಕೊಳ್ಳುತ್ತಾರೆಯೇ? ನೀರಿಗಾಗಿ ಹೋರಾಟ ಮಾಡುವವರು ಯಾರು? ಹೋರಾಟ ಮಾಡುವವರು ಯಾರೋ, ಮಜಾ ಮಾಡುವವರು ಯಾರೋ ಎನ್ನುವ ಹಾಗೆ ಆಗಿಬಿಡುತ್ತದೆ ಈ ದೇಶದಲ್ಲಿ. ಬೆಂಗಳೂರಿಗೆ ಕಾವೇರಿ ನೀರು ಸಿಗುವುದಿಲ್ಲ ಎಂದು Tribunal ನವರು ತಮ್ಮ final award ನಲ್ಲಿ ಹೇಳಿಬಿಟ್ಟಿದ್ದಾರೆ. ಚಳುವಳಿ ಏಕೆ ಬೇಕು? ಹೋರಾಟ ಏಕೆ ಬೇಕು? ಎಂದರೆ, ಮನೆಯಲ್ಲಿ ಕುಳಿತುಕೊಂಡರೆ ನೀರನ್ನು ಕೊಡುತ್ತಾರೆಯೇ? ನಾರಾಯಣಮೂರ್ತಿಯವರು ಎಲ್ಲವನ್ನೂ ಮನೆಗೇ ಕಳುಹಿಸುತ್ತಾರೆಯೇ? ಈ ರೀತಿಯ ಉದ್ಧಟತನದ, ಉಡಾಫೆಯ ಮಾತುಗಳಿವೆಯಲ್ಲ, ಇದು ಸಂಪತ್ತಿನ ಅಹಮ್ಮೋ ಅಥವಾ ಯಾವುದರ ಅಹಂ ಎಂದು ನನಗೆ ಗೊತ್ತಾಗುತ್ತಿಲ್ಲ. ಈ ಅಹಂ ಅನ್ನು ಹತೋಟಿಗೆ ತರತಕ್ಕಂಥಾದ್ದಕ್ಕೆ ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರದ ವಿರುದ್ಧ ಮಾತನಾಡುವುದು, ರಾಜಕಾರಣಿಗಳ ಬಗ್ಗೆ ಮಾತನಾಡುವುದು, ಚಳುವಳಿಗಳ ವಿರುದ್ಧ ಮಾತನಾಡುವುದು, ಕೊನೆಗೆ ರಾಷ್ಟ್ರಗೀತೆಯ ವಿರುದ್ಧವೇ ಮಾತನಾಡಲು ಬಂದ ಮೇಲೆ ಇವರಿಗೆ ನಮ್ಮ ದೇಶದ ಮೇಲೆ ಎಷ್ಟರ ಮಟ್ಟಿಗೆ ಪ್ರೀತಿ ಇದೆ, ಪ್ರೇಮ ಇದೆ, ಗೌರವವಿದೆ ಎನ್ನತಕ್ಕಂಥಾದ್ದು ಬಹಳ ಸ್ಪಷ್ಟವಾಗಿ ಅರ್ಥವಾಗುತ್ತದೆ. ಅವರಿಗೆ ಒಂದು ಎಳ್ಳಷ್ಟೂ ಕೂಡ ರಾಷ್ಟ್ರ ಪ್ರೇಮವಿಲ್ಲ ಎಂದು ಹೇಳಬೇಕಾಗುತ್ತದೆ. ಆದ್ದರಿಂದ,

ನೀವು ಅವರ statement ತರಿಸಿ, ಅದು ಸತ್ಯವೋ, ಸುಳ್ಳೋ ಎಂದು ನೋಡಿ ಸರ್ಕಾರ ಇದರ ಬಗ್ಗೆ ತನಿಖೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ :– ತಾವು ಗೃಹಮಂತ್ರಿಗಳಾಗಿದ್ದೀರಿ. ಇಷ್ಟು ಹೊತ್ತಿಗಾಗಲೇ ಇದರ ಬಗ್ಗೆ ವರದಿ ಬಂದಿರಬಹುದು. ಬಂದಿಲ್ಲದಿದ್ದರೆ, ವರದಿ ತರಿಸಿ ನಾಳೆ ಅದನ್ನು ಸದನದ ಮುಂದೆ ಮಂಡಿಸುತ್ತೇನೆ ಎಂದರೆ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಇದು ಬಹಳ ಗುರುತರವಾದುದು, ಗಂಭೀರವಾದುದು. ಇದನ್ನು ಅಷ್ಟು ಸುಲಭವಾಗಿ ಬಿಡಲು ಸಾಧ್ಯವೇ ಇಲ್ಲ. ಈ ದೇಶವೇ ಒಂದು, ವ್ಯವಸ್ಥೆಯೇ ಒಂದು ಎನ್ನುವ ರೀತಿಯಾಗಿ, ರಾಷ್ಟ್ರಧ್ವಜದ ಬಗ್ಗೆ ಈ ರೀತಿಯಾಗಿ ಪ್ರಪ್ರಥಮವಾಗಿ ಅವರು ಈ ರೀತಿ ಮಾತನಾಡಿದ್ದಾರೆ. ಇದುವರೆಗೆ ಈ ರೀತಿ ಈ ದೇಶದಲ್ಲಿ ಯಾರೂ ಮಾತನಾಡಿಲ್ಲ.

ಶ್ರೀ ಸಿದ್ದು ಸವದಿ (ಜಮಖಂಡಿ) :– ಮಾನ್ಯ ಉಪಾಧ್ಯಕ್ಷರೇ, ನಾರಾಯಣಮೂರ್ತಿಯವರು ರಾಷ್ಟ್ರಗೀತೆಗೆ ಮತ್ತು ರಾಷ್ಟ್ರಧ್ವಜಕ್ಕೆ ಅವಮಾನವಾಗುವಂಥ ರೀತಿಯಲ್ಲಿ ನಡೆದುಕೊಂಡಿರುವುದು ಅಕ್ಷಮ್ಯ ಅಪರಾಧ. ಅವರು ರೊಕ್ಕದ ಮದದಿಂದ ಈ ದೇಶವನ್ನು ಗುಲಾಮಗಿರಿಗೆ ತಳ್ಳಲಿಕ್ಕೆ ಹೊರಟಿದ್ದಾರೆ ಎನ್ನುವಂಥ ಭಾವನೆ ನಮ್ಮೆಲ್ಲರಿಗೆ ಎದ್ದು ಕಾಣುತ್ತಿದೆ. ಪ್ರತಿಯೊಂದು ಹಂತದಲ್ಲೂ ಸಹ ಅವರ ವರ್ತನೆ ಅಕ್ಷಮ್ಯ ಅಪರಾಧದಂತೆ ಕಾಣುತ್ತಿದೆ. ಅದಕ್ಕಾಗಿ, ಅವರಿಗೆ ರಾಷ್ಟ್ರದ್ರೋಹಿಗಳು ಎನ್ನುವ ಪಟ್ಟಿ ಕಟ್ಟಿ ಅವರನ್ನು ಗಡಿಪಾರು ಮಾಡಬೇಕು ಎಂದು ಈ ಸಭೆಯ ಮುಖಾಂತರ ಒತ್ತಾಯ ಮಾಡುತ್ತೇನೆ. ಅಂಥ ದ್ರೋಹಿಗಳಿಗೆ ಇಲ್ಲಿ ಎಳ್ಳಷ್ಟೂ ಅವಕಾಶ ಕೊಡಬಾರದು. ಅವರೇನೋ ತಿಳಿದುಕೊಂಡಿದ್ದಾರೆ, ನಾನೇ ಶಾಣೆ, ನಾನೇ ಇದನ್ನೆಲ್ಲ ಸಾಧಿಸಿರುವುದು ಎಂದು ತಿಳಿದುಕೊಂಡಿದ್ದಾರೆ. ಅಂಥವರು ಇನ್ನೂ ಹತ್ತು ಮಂದಿ ಬಂದರೂ ಸಾಕುವಂಥ ಯೋಗ್ಯತೆ ನಮ್ಮ ಕರ್ನಾಟಕಕ್ಕಿದೆ. ಅವರಿಗೆ ಪರ್ಯಾಯವಾಗಿ ಬೇರೆ ವ್ಯವಸ್ಥೆಯನ್ನು ಬೆಳೆಸುವುದರ ಮುಖಾಂತರ ಅವರಿಗೆ ಬುದ್ಧಿ ಕಲಿಸುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ನಾನು ಈ ಸದನದಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ :– ಮಾನ್ಯ ಉಪಾಧ್ಯಕ್ಷರೇ, ನಾರಾಯಣಮೂರ್ತಿಯವರಿಗೆ ಅಂಥ ದುರಹಂಕಾರ ಬರಬೇಕಾದರೆ, ಅವರು ಇಂಥ ದುರಹಂಕಾರದ ಮಾತನ್ನು ಆಡಬೇಕಾದರೆ ಅದಕ್ಕೆ ಕಾರಣ,

ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ, ಅವರಿಗೆ ನಮ್ಮ ಇಡೀ ರಾಜ್ಯವನ್ನೇ ಮಾರಿಬಿಟ್ಟು, ಅವರಿಗೆ ಜಮೀನನ್ನು ಕೊಟ್ಟರಲ್ಲ ಅದು ಕಾರಣ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ದೇವೇಗೌಡರ ಕಾಲದಲ್ಲಿ ಕೊಟ್ಟರಲ್ಲ, ಅದನ್ನು ಮಾತನಾಡಿ.

(ಗೊಂದಲ)

ಶ್ರೀ ಕೃಷ್ಣಬೈರೇಗೌಡ :- ಗಂಭೀರವಾದಂಥ ವಿಚಾರವನ್ನು ಮಾತನಾಡುತ್ತಿರುವಾಗ ಅದರಲ್ಲಿ ರಾಜಕೀಯ ಮಾತನಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು :- ವೆಂಟಕೇಶ್‌ರವರೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೃಷ್ಣಬೈರೇಗೌಡ :- ಗಂಭೀರವಾದ ವಿಷಯ ಮಾತನಾಡುತ್ತಿರುವಾಗ ರಾಜಕೀಯ ಮಾಡಿ ಸಣ್ಣತನ ತೋರಿಸಬೇಡಿ.

(ಗೊಂದಲ)

ಉಪಾಧ್ಯಕ್ಷರು :- ಬೈರೇಗೌಡರೇ, ಕುಳಿತುಕೊಳ್ಳಿ. ಆಯಿತು, ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈಗ ಎಲ್ಲರೂ ಪಕ್ಷಾತೀತವಾಗಿ ಅವರ ನಡವಳಿಕೆಯನ್ನು ಖಂಡಿಸುತ್ತಿದ್ದಾರೆ. ಅದರೊಳಗೆ ನೀವು ರಾಜಕೀಯ ಬೆರೆಸತಕ್ಕಂಥಾದ್ದನ್ನು ಮಾಡಿದರೆ ಚೆನ್ನಾಗಿರುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು :- ವೆಂಟಕೇಶ್‌ರವರೇ ಕುಳಿತುಕೊಳ್ಳಿ, ಇದು ಸರಿಯಲ್ಲ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ :- ಏಕೆ ಹೇಳಬಾರದು ? ಇಲ್ಲಿಯ ಭೂಮಿಯನ್ನೆಲ್ಲ ಮಾರಿಬಿಟ್ಟು.....

(ಗೊಂದಲ)

ಉಪಾಧ್ಯಕ್ಷರು :- ಒಂದು ನಿಮಿಷ,.....

(ಗೊಂದಲ)

ಉಪಾಧ್ಯಕ್ಷರು :- ವೆಂಕಟೇಶ್ ಕುಳಿತುಕೊಳ್ಳಿ. ಈಗ ಅದರ ಬಗ್ಗೆ ಏಕೆ ಮಾತನಾಡುತ್ತೀರಿ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ :- ನಾರಾಯಣ ಮೂರ್ತಿಯವರಿಗೆ ಯಾರ್ಯಾರು ಸಹಾಯ ಮಾಡಿದ್ದಾರೆ, ಎಷ್ಟೆಷ್ಟು ಭೂಮಿ ಕೊಟ್ಟಿದ್ದಾರೆ, ಎಲ್ಲೆಲ್ಲಿ ಭೂಮಿ ಕೊಟ್ಟಿದ್ದಾರೆ ಎನ್ನುವುದನ್ನು ಹೇಳಲಿ.

(ಗೊಂದಲ)

ಉಪಾಧ್ಯಕ್ಷರು :- ಆಯಿತಲ್ಲ. ಎಲ್ಲರೂ ಕುಳಿತುಕೊಳ್ಳಿ. ಈಗ ಎಂ.ಪಿ. ಪ್ರಕಾಶ್‌ರವರು ಉತ್ತರ ಕೊಡಿ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ :- ಯಾರ್ಯಾರ ಕಾಲದಲ್ಲಿ ಏನೇನಾಯಿತು ಎಂದು ತನಿಖೆ ನಡೆಯಲಿ. ಯಾರ್ಯಾರು ಕೊಟ್ಟರು, ಏನು ಮಾಡಿದರು ಎಲ್ಲವನ್ನೂ ಹೇಳಲಿ.

(ಗೊಂದಲ)

ಉಪಾಧ್ಯಕ್ಷರು :- ಆಯಿತು, ಕುಳಿತುಕೊಳ್ಳಿ. ಅವರು ಏನು ಉತ್ತರ ಕೊಡುತ್ತಾರೋ ಕೇಳೋಣ.

(ಗೊಂದಲ)

ಉಪಾಧ್ಯಕ್ಷರು :– ನಾವು ಇದಕ್ಕೆ permit ಮಾಡಿದ್ದೇ ತಪ್ಪಾಯಿತು. ಅವರು ಹೇಳಿದ್ದು ಆಯಿತು. ಅವರು ಏನು ಉತ್ತರ ಕೊಡುತ್ತಾರೆ ಎಂದು ನೋಡೋಣ, ನೀವು ಕುಳಿತುಕೊಳ್ಳಿ. ಅದನ್ನು ಕಡತದಿಂದ ತೆಗೆದುಹಾಕೋಣ ಬಿಡಿ. ಅವರು ಹೇಳಿದ್ದನ್ನು ಕಡತದಿಂದ ತೆಗೆದುಹಾಕಿ.

ಶ್ರೀ ಎಂ.ಪಿ. ಪ್ರಕಾಶ್ :– ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಪಕ್ಷಾತೀತವಾಗಿ ಎಲ್ಲ ಮಾನ್ಯ ಸದಸ್ಯರುಗಳು, ನಾರಾಯಣಮೂರ್ತಿಯವರು ರಾಷ್ಟ್ರಗೀತೆಗೆ ಅಪಮಾನಗೊಳಿಸುವಂಥ ರೀತಿಯಲ್ಲಿ ವರ್ತಿಸಿದ್ದಾರೆ ಮತ್ತು ಮಾತನಾಡಿದ್ದಾರೆ ಎಂದು ಹೇಳಿದ್ದಾರೆ. ಅದು ನಿಜವಾಗಿಯೂ ಅಕ್ಷಮ್ಯ ಅಪರಾಧ. ಒಂದು ರಾಷ್ಟ್ರವೆಂದರೆ ಅದಕ್ಕೆ ಲಾಂಛನವಾಗಿ ಇರತಕ್ಕಂಥಾದ್ದು ಒಂದು ಧ್ವಜ, ಒಂದು ಸಂವಿಧಾನ, ಒಂದು ಸೈನ್ಯ ಮತ್ತು ಒಂದು ರಾಷ್ಟ್ರಗೀತೆ. ಅನೇಕ ಬಾರಿ ಇಂಥ ವಿಚಾರಗಳಲ್ಲಿ ನಾವು ಚರ್ಚೆ ಮಾಡಿರತಕ್ಕಂಥಾದ್ದು ಇದೆ. ಇದು ನಮ್ಮ ಸ್ವಾಭಿಮಾನದ, ರಾಷ್ಟ್ರದ ಪ್ರತೀಕವಾಗಿರುತ್ತದೆ. ಬೇರೆ ರಾಷ್ಟ್ರಗಳಿಗೆ ನಮ್ಮ ರಾಷ್ಟ್ರದ ಅಧ್ಯಕ್ಷರು ಹೋದಾಗ ಅಥವಾ ಅಲ್ಲಿಯ ಪ್ರಧಾನ ಮಂತ್ರಿಗಳು ನಮ್ಮಲ್ಲಿಗೆ ಬಂದಾಗ ಅವರ ರಾಷ್ಟ್ರಗೀತೆಯನ್ನೂ ನುಡಿಸುತ್ತೇವೆ, ನಮ್ಮ ರಾಷ್ಟ್ರಗೀತೆಯನ್ನೂ ನುಡಿಸುತ್ತೇವೆ. ಒಮ್ಮೆ ಒಂದು ಸನ್ನಿವೇಶವಾಯಿತು. ಒಲಂಪಿಕ್ ಕ್ರೀಡಾಕೂಟದ ಮ್ಯಾರಥಾನ್ ರೇಸ್‌ನಲ್ಲಿ ಕೆರೆಬಿಯನ್ ಸೀಸ್‌ನಲ್ಲಿ ಬರತಕ್ಕಂಥ ಸುರೆನಾಮ ಎನ್ನುವ ಒಂದು ಸಣ್ಣ ದೇಶ ಭಾಗವಹಿಸಿತ್ತು. ಸುರೆನಾಮ ಎನ್ನುವಂಥ ದೇಶ ಇದೆ ಎನ್ನುವುದು ಒಲಂಪಿಕ್ ಕ್ರೀಡಾಕೂಟವನ್ನು ಸಂಘಟನೆ ಮಾಡಿದಂಥವರಿಗೆ ಗೊತ್ತಿರಲಿಲ್ಲ. ಆದರೆ, ಮ್ಯಾರಥಾನ್ ರೇಸ್‌ನಲ್ಲಿ ಸುರೆನಾಮ ದೇಶದ ಒಬ್ಬ ಅಥ್ಲೇಟ್ ಚಿನ್ನದ ಪದಕವನ್ನು ಗೆದ್ದ. ಆಗ ಆ ದೇಶದ ರಾಷ್ಟ್ರಗೀತೆಯನ್ನು ನುಡಿಸಲು ಹುಡುಕಿಸಿದಾಗ, ಆ ಸುರೆನಾಮ ದೇಶದ ರಾಷ್ಟ್ರಗೀತೆ ಆ ಸಂಘಟಕರ ಹತ್ತಿರ ಇರಲಿಲ್ಲ. ಆಗ ಆ ಅಥ್ಲೇಟ್ ಸ್ವತಃ ತಾನು victory stand ಮೇಲೆ ನಿಂತುಕೊಂಡು ತಮ್ಮ ದೇಶದ ರಾಷ್ಟ್ರಗೀತೆಯನ್ನು ತಾನೇ ಹಾಡಿದ. ಅಂಥ ಸನ್ನಿವೇಶಗಳೂ ಇರುವಾಗ, ಇಲ್ಲಿ ಇವರು ಈ ರೀತಿಯಲ್ಲಿ ವರ್ತಿಸಿದ್ದಾರೆ ಎನ್ನುವ ಬಗ್ಗೆ ನನಗೆ ಈವರೆಗೆ ಪೊಲೀಸ್ ವರದಿಯನ್ನು ತರಿಸಿಕೊಳ್ಳಲು ಆಗಿಲ್ಲ. ಸತ್ಯ ಸಂಗತಿಯ ವರದಿಯನ್ನು ತರಿಸಿಕೊಂಡು, ಖಂಡಿತವಾಗಿಯೂ ಅಂಥಾದ್ದಾಗಿದ್ದರೆ ನಾವು ಕಾನೂನಿಗೆ ಅನುಗುಣವಾಗುವಂಥ ರೀತಿಯಲ್ಲಿ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಉಳ್ಳಾಗಡ್ಡಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವ ಬಗ್ಗೆ....

ಉಪಾಧ್ಯಕ್ಷರು :- ಪಾಟೀಲರೇ, ಅದನ್ನು ನಾಳೆ ತೆಗೆದುಕೊಳ್ಳೋಣ. ನಿಮ್ಮ ಹಾಗೆಯೇ, ಶೂನ್ಯ ವೇಳೆಯಲ್ಲಿ ಅವಕಾಶ ಕೋರಿ ಹತ್ತು ಜನರು ಸೂಚನೆಯನ್ನು ಕಳುಹಿಸಿದ್ದಾರೆ. ಈಗ ನಿಮಗೊಬ್ಬರಿಗೆ ಕೊಡುವುದಕ್ಕೆ ಹೋದರೆ, ಎಲ್ಲರಿಗೂ ತೊಂದರೆಯಾಗುತ್ತದೆ. ಆದ್ದರಿಂದ ನಿಮಗೆ ನಾಳೆ ಅವಕಾಶ ಕೊಡುತ್ತೇವೆ. ಈಗ ಒಂದೆರಡಾದರೂ Billಗಳು ಆಗಲಿ. ನಾಳೆ, ನಾಡಿದ್ದು ಎಲ್ಲ ಪೂರ್ತಿ ನಿಮ್ಮದಿದೆ. 12, 13ನೇ ತಾರೀಖು ಎಲ್ಲ ಅವರದ್ದೇ ಇರುವುದು.

ಶ್ರೀ ಸಿದ್ದರಾಮಯ್ಯ :- ನಮ್ಮದೊಂದು privilege motion ಇತ್ತು.

ಉಪಾಧ್ಯಕ್ಷರು :- ನಿಮ್ಮ privilege move ಮಾಡಿದ ಕೂಡಲೇ ಅವರಿಗೇ ಅಲ್ಲವೇ ಪೂರ್ತಿ ಅವಕಾಶವಿರುವುದು. ಅವರ ಸಮಸ್ಯೆಗಳೇನಿವೆ, ಅವುಗಳನ್ನು ಪೂರ್ತಿಯಾಗಿ ಮಾತನಾಡಲಿ ಎಂದು ತಾನೇ 12, 13ನೇ ತಾರೀಖು ಅವರಿಗೆ ಕೊಟ್ಟಿರುವುದು. ಈಗ ಶಾಸನ ರಚನೆಯನ್ನು ತೆಗೆದುಕೊಳ್ಳೋಣ. ಮೊದಲಿಗೆ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ವಿಧೇಯಕವನ್ನು ತೆಗೆದುಕೊಳ್ಳೋಣ. ಸನ್ಮಾನ್ಯ ಚಲುವರಾಯಸ್ವಾಮಿಯವರು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈರುಳ್ಳಿ ಬೇಗನೆ ಕೆಟ್ಟು ಹೋಗುತ್ತದೆ, ಅದು ಬಡವಸ್ತು. ಜೋಳ, ತೊಗರಿ ಇವೆಲ್ಲವನ್ನು ಇಡಬಹುದು. ಆದರೆ ಟೊಮೇಟೋ, ಉಳ್ಳಾಗಡ್ಡಿಯನ್ನು ಇಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು :- ನಾಳೆ ನಿಮ್ಮ privilege ಅನ್ನು ತೆಗೆದುಕೊಂಡು ಆದಕೂಡಲೇ next ಅವರದ್ದೇ ತೆಗೆದುಕೊಳ್ಳೋಣ. ಪಾಟೀಲರು ಬೇಕಾದರೆ ನಾಳೆ ಅರ್ಧ ಗಂಟೆ ಮಾತನಾಡಲಿ.

ಶ್ರೀ ಎಂ.ಪಿ. ಪ್ರಕಾಶ್ :- ಅವರು ತಮಾಷೆಗೆ ಹೇಳಿದರು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾನೂನು ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಸಂಬಂಧಪಟ್ಟ Ministers ಇದ್ದಾಗ ಆಯಾಯ Bill ಗಳನ್ನು ಚರ್ಚೆಗೆ ತೆಗೆದುಕೊಳ್ಳುವುದರಿಂದ ಸ್ವಲ್ಪ ಗೌರವ ಬರುತ್ತದೆ, ಇರುತ್ತದೆ. ಈಗ ಯಾರ್ಯಾರು ಮಂತ್ರಿಗಳು ಸದನದಲ್ಲಿದ್ದಾರೆ ಅವರ Bill ಗಳನ್ನು pass ಮಾಡಿಸಿಕೊಡಿ. ಸಂಬಂಧಪಟ್ಟ Minister ಸದನದಲ್ಲಿ ಇಲ್ಲದಿರುವಾಗ ಅವರಿಗೆ ಸಂಬಂಧಿಸಿದ Bill ಅನ್ನು pass ಮಾಡಿಸುವುದೆಂದರೆ ಏನರ್ಥ?

ಶ್ರೀ ಧರ್ಮಸಿಂಗ್ :- ಮಾನ್ಯ ಪ್ರಕಾಶ್‌ರವರೆ, Bill ಅನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವಾಗ ಸಂಬಂಧಪಟ್ಟ ಮಂತ್ರಿಗಳು ಸಹ ಸದನದಲ್ಲಿ ಇರುವುದಿಲ್ಲವೆಂದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ :- ಈಗ ಸದನದಲ್ಲಿರುವ ಮಂತ್ರಿಗಳ ಇಲಾಖೆಗೆ ಸಂಬಂಧಿಸಿದ Bill ಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ.. ಆಗಬಹುದು. ಮೋಟಾರು ವಾಹನಗಳಿಗೆ ಸಂಬಂಧಿಸಿದ Bill ಸಂಬಂಧಪಟ್ಟ ಸಚಿವರು ಬಂದ ಮೇಲೆಯೇ ಪರ್ಯಾಲೋಚನೆಗೆ ಬರಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಕಾನೂನು ಸಚಿವರೆ, ನೀವೇ Power of Attorney ತೆಗೆದುಕೊಳ್ಳಿ. ಆದರೆ, ಒಬ್ಬರದು ಮಾತ್ರ ತೆಗೆದುಕೊಳ್ಳಿ. ಎಲ್ಲರ power of attorney ನೀವೇ ತೆಗೆದುಕೊಂಡರೆ ಹೇಗೆ? ಪರ ಮಾತನಾಡುವವರೂ ನೀವೆ, ವಿರುದ್ಧ ಸಹ ನೀವೇ.

ಉಪಾಧ್ಯಕ್ಷರು :- ಜಗದೀಶ್ ಶೆಟ್ಟರ್‌ರವರೆ, ಸಾರಿಗೆ ಇಲಾಖೆಯ Bill ಅನ್ನು ಮಂಡಿಸಿ.

ಶ್ರೀ ಜಗದೀಶ್ ಶೆಟ್ಟರ್ :- ಸಂಬಂಧಪಟ್ಟ ಸಚಿವರು ಇಲ್ಲ.

ಉಪಾಧ್ಯಕ್ಷರು :- Parliamentary Affairs Minister ರವರು ಹೇಳುತ್ತಿಲ್ಲ, ನಾನು ಒಪ್ಪುತ್ತೇನೆ. Parliamentary Affairs Minister ಆಗಿ ಅವರು ಚೆಲುವರಾಯಸ್ವಾಮಿಯವರ ಪರವಾಗಿ ಹೇಳಬಾರದೇ?

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾವು ಪುಸ್ತಕ ತೆಗೆದು ನೋಡಿ, Bill ಅನ್ನು pilot ಮಾಡಬೇಕಾದದ್ದು, move ಮಾಡಬೇಕಾದದ್ದು, pass ಮಾಡಿಕೊಡಿ ಎಂದು ಕೇಳಬೇಕಾದದ್ದು ಆಯಾಯ ಖಾತೆ ಸಚಿವರ ಆದ್ಯ ಕರ್ತವ್ಯ ಎಂದು ನಿಗದಿಯಾಗಿ ಹೇಳಿದೆ. ನಾನು ಇಲ್ಲಿ ಹುಡುಗಾಟಕ್ಕೆ ಮಾತನಾಡುತ್ತಿಲ್ಲ. ಸಂಬಂಧಪಟ್ಟ ಮಂತ್ರಿಗಳು explain ಮಾಡಬೇಕು, ಏನಾದರೂ difficulty ಇದ್ದರೆ ಅದನ್ನು ಹೇಳಬೇಕು. ಪ್ರಕಾಶ್‌ರವರೇ ಸಮರ್ಥಿಸಿಕೊಳ್ಳುವುದಾದರೆ ಏನಿದು? ಹೀಗಾದರೆ ಹೇಗೆ?

ಉಪಾಧ್ಯಕ್ಷರು :- ಮಾನ್ಯ ಮಾಧುಸ್ವಾಮಿಯವರೆ, ಒಂದು ನಿಮಿಷ. ಚೆಲುವರಾಯಸ್ವಾಮಿಯವರ ಪರವಾಗಿ ಕಾನೂನು ಸಚಿವರು explain ಮಾಡುತ್ತಾರೆ. ನಿಮಗೆ ಸಮಾಧಾನವಾದರೆ ಒಪ್ಪಿಕೊಳ್ಳಬಹುದು, ಇಲ್ಲವೆಂದರೆ ಬೇಡ.

ಶ್ರೀ ಜೆ.ಸಿ. ಮಾಧುಸ್ವಾಮಿ :– Rules book ತೆಗೆಯಿರಿ ಸರ್. Open the rules book. Kaul and Shekdhar Rules book ತೆಗೆಯಿರಿ.

ಉಪಾಧ್ಯಕ್ಷರು :– ಇದೆ. ಈಗ ಅವರೇನು ಉತ್ತರ ಕೊಡುತ್ತಾರೆ ಅದನ್ನು ಕೇಳಿ. ನಿಮಗೆ ಸಮಾಧಾನವಾದರೆ ತೆಗೆದುಕೊಳ್ಳೋಣ. ಇಲ್ಲವೆಂದರೆ ಬೇಡ. Cancel ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಕಾನೂನು ಸಚಿವರು "ಇಲ್ಲ, ನಾಳೆ ಅವರು ಬಂದ ಮೇಲೆ ತೆಗೆದುಕೊಳ್ಳೋಣವೆಂದು" ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಉಪಾಧ್ಯಕ್ಷರೆ, ಶ್ರೀ ಮಾಧುಸ್ವಾಮಿಯವರ ಅಭಿಪ್ರಾಯ, ಸಲಹೆ ಏನೆಂದರೆ, ಮಂತ್ರಿಮಂಡಲದಲ್ಲಿ ಬೇರೆಯವರು ಯಾರಾದರೂ ಕೂಡ ತಮ್ಮ ಅಪ್ಪಣೆಯನ್ನು ಪಡೆದುಕೊಂಡು ಈ ವಿಧೇಯಕವನ್ನು ಮಂಡಿಸಬಹುದು, ಪರ್ಯಾಲೋಚನೆಗೆ ಕೇಳಿಕೊಳ್ಳಬಹುದು. ಆದರೆ, ಅವರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟರು. ನಮ್ಮಲ್ಲಿರತಕ್ಕಂಥ ಇವತ್ತಿನ List of Business ನೋಡಿದರೆ, ನಮ್ಮವೇ ಮೂರ್ನಾಲ್ಕು ಮಂತ್ರಿಗಳದು ಮಸೂದೆಗಳಿವೆ. ಆದ್ದರಿಂದ ಇದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಿ, ಅಷ್ಟೊತ್ತಿಗೆ ಸಮಯ ಆಗಿಹೋಗುತ್ತದೆ. ನಾಳೆ ಹೇಗೂ ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ, ಅವರು ಪರ್ಯಾಲೋಚನೆಗೆ ಮಸೂದೆಯನ್ನು ತರಲಿ ಎಂದು ಹೇಳಿದ್ದಾರೆ. ಆದ್ದರಿಂದ, ಅವರು ನೀಡಿರುವ ಸಲಹೆ ಉತ್ತಮವಾಗಿರುವುದರಿಂದ, ದಯವಿಟ್ಟು ತಾವು ಎರಡನೇ Bill ಅನ್ನು ತೆಗೆದುಕೊಂಡರೆ ಒಳ್ಳೆಯದು.